Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 214] ಸೋಮವಾರ 2—8—48 [ಬಿಡಿ ಪ್ರತಿ 3 ಪೈ.

ಎ. ಎಂ. ಸಿ. ಸಿ.

ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಎ.ಎಂ.ಸಿ.ಸಿ ಆರಂಭವಾಯಿತು. ಕಾರ್ಯಕಾರಿ ಸಮಿತಿಗೂ ನನಗೂ ಭಿನ್ನಾಭಿಪ್ರಾಯವಿಲ್ಲ ಎಂದು ಅಧ್ಯಕ್ಷರು ಭಾವಸೆ ಇತ್ತರು ರಾಜೀನಾಮೆಯನ್ನು ವಾಪಸು ಪಡೆಯುವುದಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ಎ. ಜಿ. ರಾಮಚಂದ್ರರಾಯರು ಒಪ್ಪಿದರು. ದಿವಾಕ ಪದವಿಯನ್ನು ಕೂಡಲೇ ರದ್ದು ಮಾಡುವ ಬಗೆಗೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಿರ್ಣಯವಾಯಿತು.

ಮೈಸೂರು ಕಾಂಗ್ರೆಸ್ ಭಾರತ ಕಾಂಗ್ರೆಸ್ಸಿಗೆ ಐಕ್ಯವಾಗುವ ಬಗ್ಗೆ ತೀರ್ಮಾನಿಸಲು ಮತ್ತೊಂದು ಅಧಿವೇಶನ ಕರೆಯುವುದಾಗಿ ಅಧ್ಯಕ್ಷರು ಭಾವಸೆ ಇತ್ತರು.

ರಾಜಾ ಗೋಪೀಜಂದ್

ಮೊನ್ನೆ ರಾತ್ರಿ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಹುಣಸೂರು ಕೃಷ್ಣಮೂರ್ತಿ ವಿರಚಿತ ಕನ್ನಡ ನಾಟಕ 'ರಾಜಾ ಗೋಪಿಚಂದ್' ಶ್ರೀ ವೀರಣ್ಣನವರ ಗುಬ್ಬಿ ಕಂಪೆನಿಯವರಿಂದ ಪ್ರಪ್ರಥಮವಾಗಿ ಪ್ರದರ್ಶಿಸಲ್ಪಟ್ಟಿತು.

ಅಧ್ಯಕ್ಷರು ಶ್ರೀ ಹುಣಸೂರು ಕೃಷ್ಣಮೂರ್ತಿಯವರ ಕೃತಿಯನ್ನು ಮತ್ತು ಕಂಪೆನಿಯವರ ಪಾತ್ರ ವೈಖರಿಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಗುಬ್ಬಿ ಕಂಪೆನಿ ವ್ಯವಸ್ಥಾಪಕರಾದ ಶ್ರೀ ಎಂ ಮಹಾದೇವ ಸ್ವಾಮಿಯವರು ಅಧ್ಯಕ್ಷರಿಗೆ ಹಾರವನ್ನರ್ಪಿಸಿದರು

ಓರ್ಮ ನಟಿಯ ಕೊಲೆ

ಮುಂಬೈ ವಾಸಿಯಾದ 'ಖುರ್ಷಿದ್ ಇಬ್ರಾಹಿಂ' ಎಂಬ ಸಿನೇಮಾ ನಟಿಯನ್ನು ಆಕೆಯ ನೌಕರನಾದ ದಾವೂದ್ ಎಂಬುವನು ರಾತ್ರಿ ಮಲಗಿದ್ದಾಗ ಬಂದು ಆಯುಕಟ್ಟಿನ ಸ್ಥಳಕ್ಕೆ ಹೊಡೆದನು; ನಂತರ ಆಸ್ಪತ್ರೆಯಲ್ಲಿ ಆಕೆಯು ಸತ್ತಳು.

ಸುದ್ದಿಗೆಳು

ಲಂಡನ್ ಜು 30—ಕಾಮನ್ಸ್‌ನಲ್ಲಿ ಜರ್ಚಿಲ್ಲರು ಹೈದರಾಬಾದಿನ ವಿಷಯ ಮಾಡಿದ ವಾದಕ್ಕೆ ಪಟ್ಟಿಯರ ಅಚ್ಚುಕಟ್ಟಿನ ಉತ್ತರವಿತ್ತರಲ್ಲಿ—ಹೀಗೆಂದರು—ಇಂಡಿಯಾದ ಆಡಳಿತದಲ್ಲಿ ಪ್ರವೇಶಿಸಲವಕಾಶವಿಲ್ಲ—ಹಿಂದುಗಳು ಮಾಡುತ್ತಿರುವುದೆಲ್ಲವೂ ತಪ್ಪು ಎಂದು ಭಾವಿಸಿ ಹೊಂದಿ ಮಾತಾಡಬಾರದು—ಹೈದರಾಬಾದು ಸಮಸ್ಯೆ ವಿಚಾರವಾಗಿ ಮುಖ್ಯ ಮಂತ್ರಿ ಪಂ|| ನೆಹರು ಉದಾರವಾಗಿ ಮತ್ತೆ ವಿವೇಕದಿಂದ ವರ್ತಿಸುತ್ತಿದ್ದಾರೆ

ನವದೆಹಲಿ ಜು. 30—ಜನರಿಗೆ ಬಟ್ಟೆಯನ್ನು ನ್ಯಾಯದ ಬೆಲೆಗೆ ದೊರಕಿಸುವ ಹೊಸ ಯೋಜನೆಯಲ್ಲಿ, ಭಾರತಾದ್ಯಂತ ಮಿಲ್ಲುಗಳ ಬಟ್ಟೆ ದಾಸ್ತಾನು ಸರಕಾರ ವಶಪಡಿಸಿಕೊಂಡಿದೆ— ಬಟ್ಟೆ ಮೇಲೆ ಕ್ರಯ ಮುದ್ರಿಸಲಾಗುವುದು. ಟೆಕ್ಸ್‌ಟೈಲ್ ಕಮಿಷನ್ನರು ಸರಿಯಾದ ಚಿಲ್ಲರೆ ಮತ್ತು ಒಟ್ಟು ವ್ಯಾಪಾರಿಗಳ ಪಟ್ಟಿ ಕೊಡುವರು ಇವರ ಮುಖಾಂತರ ಸೊಸೈಟಿಗಳ ಮೂಲಕ, ಫೇರ್ ಪ್ರೈಸ್ ಡಿವೋ ಮೂಲಕ ಪ್ರಾಂತ್ಯ ಮತ್ತು ಸಂಸ್ಥಾನದ ಮೇಲ್ವಿಚಾರಣೆ ಮೇಲೆ. ಕೋಟಾ ಪ್ರಕಾರ ಬಟ್ಟೆ ಹಂಚಿಕೆ ನಡೆಯುವುದು—ಬಟ್ಟೆ ಹೆಚ್ಚು ದಾಸ್ತಾನು, ಅಕ್ರಮಲಾಭ ಪಡೆಯುವವರು ಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತೆ.

ಅಕ್ಟೋಬರ್ ತಾ || 9 ರಿಂದ ಪ್ರ. ಪ್ರ. ಸಭೆಯ ದಸರಾ ಅಧಿವೇಶನ ಪೈಸೂರಿನಲ್ಲಿ ಆರಂಭವಾಗುವುದೆಂದು ಗೊತ್ತಾಗಿದೆ.

ಮದರಾಸು ಜುಲೈ—30 ಸಂಡೂರು ಸಂಸ್ಥಾನದ ಆಡಳಿತವನ್ನು ಮದರಾಸು ಸರ್ಕಾರ ತೆಗೆದುಕೊಂಡಿದೆ

ಎಳ್ಳಷ್ಟು ದಯೆ ತೋರ ಲಾಗುವುದಿಲ್ಲ

ಹೈದರಾಬಾದ್ ಸಂಧಾನ ಬಗ್ಗೆ ಸರ್ ನಿಜಾರ್ಅರವರು ನೆಹರು ಮತ್ತು ಪಟೇಲ್‌ರವರುಗಳನ್ನು ಭೇಟಿ ಮಾಡಿದ್ದರು ರಜಾಕಾರರ ದಳ ರದ್ದು, ತಾತ್ಕಾಲಿಕ ಪ್ರಜಾ ಸರ್ಕಾರ ಸ್ಥಾಪನೆ ಶಾಂತಿ ರಕ್ಷಣೆಗಾಗಿ ಭಾರತ ಸೇನೆ ಹೈದರಾಬಾದಿನಲ್ಲಿರುವದು—ಇಷ್ಟಾದರೆ ಸಂಧಾನ ಸಾಧ್ಯವೆಂದು ಅವರುಗಳು ಸರ್ ನಿಜಾರ್ಅರವರಿಗೆ ತಿಳಿಸಿದರೆಂದು ಗೊತ್ತಾಗಿದೆ.

ದಿನಕ್ಕೆ ೧೦ ಸಾವಿರ ರೂ.

ಸರ್ ನಿಜಾರ್ಅರವರಿಗೆ ಸಂಧಾನ ನಡೆಸುವ ಅವಧಿಯಲ್ಲಿ ನಿಜಾಂ ಸರಕಾರ ದಿನಕ್ಕೆ ರೂ 10000 ಕೊಡುವುದೆಂದು ತಿಳಿದುಬಂದಿದೆ—

ಪತ್ರಿಕೋದ್ಯೋಗಿ ಸಂಘ

ಬೆಂಗಳೂರು ಜು 31—ಶ್ರೀ ರಾಜಗೋಪಾಲಚಾರರು ಬೆಂಗಳೂರಿಗೆ ದಯಮಾಡಿಸಿದಾಗ ತಾವು ತಮ್ಮ ಸಂಘದಲ್ಲಿ ಪಂ|| ನೆಹರು ಭಾವಚಿತ್ರ ಅನಾವರಣ ಮಾಡಲೂ ಮತ್ತು ಸರ್ ನಿಜಾರ್ಅರನ್ನು ಶ್ರೀ ವೆಂಕಟಕೃಷ್ಣಯ್ಯನವರ ಸ್ಮಾರಕ ಭಾಷಣ ಮಾಡಲು ಪ್ರಾರ್ಥಿಸುವ ನಿರ್ಣಯಗಳು ಸಂಸ್ಥಾನ ಪತ್ರಿಕೋದ್ಯೋಗಿ ಸಂಘದಲ್ಲಿ ಮಂಜೂರಾದವು

ಪೌರಸಭೆ

ಮೊನ್ನೆ ದಿವಸ ಸೇರಿದ್ದ ಪೌರಸಭೆಯ ಸಾಧಾರಣ ಸಭೆಯಲ್ಲಿ ಆಹಾರ ಪದಾರ್ಥಗಳ ಬೆಲೆ ಉಗ್ರವಾಗಿರುವ ಅಂಶವನ್ನು ಪ್ರಭುತ್ವದ ಗಮನಕ್ಕೆ ತರಬೇಕೆಂದು ಶ್ರೀ ಬೇಲೂರಯ್ಯನವರು ತಿಳಿಸಿದರು ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಲೋಕಪಾವನಿ ಸೇತುವೆ ಕೊಚ್ಚಿಹೋಯಿತು

ಹಿರೋಡೆ ಬಳಿ ಇರುವ ಲೋಕಪಾವನಿ ಸೇತುವೆ ವಿಪರೀತ ಮಳೆ ಬಂದ ಪ್ರಯುಕ್ತ ಕೊಚ್ಚಿಹೋಗಿದೆಯೆಂದು ಗೊತ್ತಾಗಿದೆ

ಕಂಪೆನಿ ಮಾಲೀಕರಾದ ಶ್ರೀ
ರಣ್ಣನವರು ಪೌರಸಭೆ ಬಡ
ನಿಧಿಗೆ ರೂ 800 ಸಹಾ
ಸ ಮಾಡಿರುರು

lands
1—8—1948
Scarlet
Horseman
Peter Cookson &Janet Shaw
10 Chapters with full of
ills and Excitements
OWS

At Opera
31—7—48 ರಿಂದ
ಟಿ. ಆರ್. ರಾಮಚಂದ್ರ
ಎಂ ಆರ್ ಸ್ವಾಮಿನಾಥ್ ಭಾಗ್ಯಂ
ಟಿ. ಪ್ರೇಮಾವತಿ ಪಾತ್ರವಹಿಸಿರುವರು.
ವಿದ್ಯಾಪತಿ
(ತಮಿಳು)
.... ಪ್ರತಿದಿನ 3 ಆಟಗಳು ....
ಬು[illegible]ಗಳುಳ್ಳದ್ದು

ಸಂ॥ 2-7-48 ॥ಶ್ರೀ॥ ನಂ. 99

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಮೂರ್ಖತನವೇ ಅನರ್ಥಕ್ಕೆ ಹೇತು

[ತ್ರೀ ಕರಪಾತ್ರಸ್ವಾಮಿಗಳವರು]

[ಮುಂದುವರಿದುದು]

ಆತನ ಸನ್ನಿಯಿಂದಲೇ ಹೃದಯವು ಕುಣಿಯುವುದು. ಹೇಗೆ ನಟನ ಆಶ್ರಯದಿಂದ ಮರದ ಬೊಂಬೆಗಳು ಕುಣಿಯುವುವೋ ಹಾಗೆಯೇ ಪೂರ್ಣತಮ ಪುರುಷೋತ್ತಮ ಪರಬ್ರಹ್ಮ ಭಗವಂತನ ಪ್ರೇರಣೆಯಿಂದಲೇ ಹೃದಯವು ಅಲುಗುವುದು. ದೋಷವನ್ನು ಹೋಗಲಾಡಿಸಲಿಕ್ಕಾದರೊ ಅನೇಕ ಸಾಧನಗಳಿವೆ, ಆದರೆ ಅವುಗಳಲ್ಲಿ ತುಂಬಾ ತಂಟೆಗಳಿವೆ–ಅನೇಕ ಜಗಳಗಳಿವೆ. ಎಲ್ಲ ದುಃಖಗಳ ಮೂಲ, ಸರ್ವ ಪಾಪಗಳ ಸಾರ, ಸರ್ವ ಏಪತ್ತುಗಳ ತತ್ತ್ವವಾದರೊ ಅದೇ ದುರ್ಮತಿ. ಅತಃ ದುರ್ಮತಿ ಅಳಿದು ಸುಮತಿಯು ಸಂಚರಿಸುವುದಕ್ಕಾಗಿ ಸರ್ವ ಪ್ರೇರಕನಾದ ಭಗವಂತನನ್ನು ಬಿಟ್ಟು ಯಾಂ ಆಶ್ರಯವನ್ನು ಪಡೆಯಲಿ? ಪ್ರಾಣಿಗಳೊಳಗೆ ಸದ್ಬುದ್ಧಿಯುಂಟಾಯಿತು, ಧರ್ಮದ ರಕ್ಷಣೆಯಾಯಿತು ಅಮೇಲೆ ಅದರ ಮೂಲಕ ಪ್ರಾಣಿಗಳ ಕಲ್ಯಾಣವಾಯಿತು. ನಾವು ಸರ್ವಥಾ ಅಸಹಾಯರಾಗಿದ್ದೇವೆ, ನಮ್ಮ ಹತ್ತಿರ ಹಣವಿಲ್ಲ, ಅಸ್ತ್ರವಸ್ತ್ರಗಳಿಲ್ಲ. ಭಗವಂತನನ್ನು ಕರೆಯುವುದರ ಹೊರತು ನಾವು ಮಾಡಬಲ್ಲೆವಾದರೂ ಏನನ್ನು? ಇತ್ಯ ಈ ಕಡೆ ಯಾದಿಷ್ಟು ಪ್ರಗತಿಯು ಕಂಡುಬೀಳುತ್ತಿದೆಯೊ, ಅದು ಆ ಪುರುಷೋತ್ತಮ, ಪರಬ್ರಹ್ಮ ಸರ್ವಾಂತರಾತ್ಮನಾದ ಭಗವಂತನ ಪ್ರೇರಣೆಯು ಫಲವೇ ಆಗಿದೆ ನಾವು ಯಾವ ಆತನನ್ನು ಸ್ಮರಣೆ ಮಾಡುವೆವೋ ಆತನನ್ನು ಆಹ್ವಾನ ಮಾಡುವೆವೊ ಅದು ಅವನ ಮಂಗಲಮಯ ಪ್ರೇರಣೆಯಿಂದಾಗಿದೆ. ಆದ್ದರಿಂದಲೇ ಭಕ್ತನು ಭಗವಂತನಿಂದ ಇಷ್ಟು ಸಮಾದರವನ್ನು ಬೇಡುತ್ತಾನೆ ಇಷ್ಟು ಭಾರವನ್ನು ಹಾಕುತ್ತಾನೆ—'ಹೇ ಪ್ರಭೋ! ನೀನೇ ಹೊತ್ತುಕೊಂಡು ನೀನೇ ಹೊರಿಸಿ ಕೊಡು ಮತ್ತು ಹೊರುವನನ್ನೂ ಸಂಗಡ ಕೊಡು. ಎಲ್ಲಾ ನೀನೇ ಮಾಡಿಕೊಡು. ಭಗವನ್, ನಾವು ನಿನ್ನನ್ನು ಕರೆಯುವುದೂ, ನಿನ್ನನ್ನು ಸ್ಮರಿಸುವುದೂ ಕೂಡ ನಿನ್ನದೇ. ಪ್ರೇರಣೆಯಿಂದ ನೀನೊಂದು ವೇಳೆ ನಮಗೆ ಆಶ್ರಯವೀಯದೆ ಹೋದರೆ ನಾವು ನಿನ್ನಿಂದ ವಿಮುಖರಾಗಿ ಕೊನೆಗೆ ಅನರ್ಥವನ್ನೇ ಮಾಡುವೆವು. ಹೀಗಿರುವಾಗ ನಾವು ನಿನ್ನನ್ನು ಕರೆಯದೆ ಪೂಡುವುದೇನು?

ಈ ದುರ್ಬುದ್ಧಿಯು ಬಹುಕಾಲದಿಂದ ನಡೆದುಬರುತ್ತಿದೆ. ನಾವು ಏನಾದರೂ ಮಾಡಿಕೊಳ್ಳುವೆವೆಂದು ನಮಗೆ ಅಹಂಕಾರ ಮತ್ತು ಗರ್ವವಿರುತ್ತದೆ ಈ ಯಾವ ಅಹಂಕಾರವಿದೆಯೋ, ಗರ್ವವಿದೆಯೋ ಅದೇ ದುರ್ಬುದ್ಧಿ. ಇದರ ದೆಸೆಯಿಂದಲೇ ನಾವು ಭಗವಂತನನ್ನು ಕರೆಯುವುದಿಲ್ಲ, ಆತನ ಶರಣಕ್ಕೆ ಹೋಗುವುದಿಲ್ಲ, ಆದರೆ ಉಚ್ಛೃಂಖಲತೆಯೊಂದಿಗೆ ನಮ್ಮ ಹೃದಯದಲ್ಲಿ ಗರ್ವಗೊಳ್ಳುವೆವು. ಆದುದರಿಂದಲೇ ಭಕ್ತರು ನಾಥಾ! ನೀನೇ ಅನುಕಂಪೆ ಮಾಸದಲ್ಲಿ ನಾವು ನಿನ್ನ ಸ್ಮರಣೆ ಮಾಡಿಯೇವು! ಎಂದು ಹೇಳಿರುವರು ಆದರೆ ಇದರೊಟ್ಟಿಗೆ ಒಂದು ಮಾತನ್ನು ಅವಶ್ಯವಾಗಿ ಗಮನದಲ್ಲಿಟ್ಟುರಬೇಕಾಗುವುದು. ಗೀತೆಯಲ್ಲಿ ಭಗವಂತನು ತಾನೇ ಹೇಳಿರುವನು—'ಮಾಮನುಸ್ಮರ ಯುದ್ಧ್ಯಚ' ತಮ್ಮ ನನ್ನ ಸ್ಮರಣೆಯನ್ನು ಮಾಡು, ಯುದ್ಧವನ್ನೂ ಮಾಡು ಅಂದರೆ ಸ್ಮರಣೆಯೊಂದಿಗೆ ಕರ್ತವ್ಯಯವಾದ ಕರ್ಮವನ್ನು ಮಾಡು. ಈ ವಿಷಯಕ್ಕೆ ಎರಡು ಸ್ಥಿತಿಗಳಿವೆ. ಒಂದು ಸ್ಥಿತಿಯಾದರೋ ಸ್ವಧರ್ಮವನ್ನು ಅನುಷ್ಠಿಸುತ್ತಾ ಭಗವಂತನನ್ನು ಕರೆಯುವುದು ಮತ್ತಿನ್ನೊಂದು ಸ್ಥಿತಿ ಎಲ್ಲ ಧರ್ಮಗಳನ್ನು ಪರಿತ್ಯಜಿಸಿ ಆ ಪರಮಾತ್ಮನ ಶರಣಕ್ಕೆ ಹೋಗುವುದು. [ಸಶೇಷ

ಹಿಂದೂಕೋಡಿನಿಂದ ಹಿಂದೂಜಾತಿಯ ಸ

ಭಾರತ ಸರ್ಕಾರವು ತರುತ್ತಿರುವ 'ಹಿಂದೂ ಕೋಡ್' ಎಂಬ ಕಾಯಿದೆಯಿಂದ ಒದಗುವ ದುಷ್ಪರಿಣಾಮಗಳನ್ನು ವರ್ಣಿಸುತ್ತಾ ಅಖಿಲಭಾರತೀಯ ಧರ್ಮ ಸಂಘದ ಕಾರ್ಯದರ್ಶಿಗಳು ಹಿಂದೂ ಜನತೆಯನ್ನು ಎಚ್ಚರಿಸಿರುವುದೇನೆಂದರೆ–

1 ಇನ್ನು ಸೋದರ–ಸೋದರಿಯರಲ್ಲಿಯೂ ತಾಯಿ–ಮಗಂದಿರಲ್ಲಿಯೂ ಪಾಲಿನ ಜಗಳವೇಳುವುದು. ಹಿಂದೂ ತಂದೆಯ ಸಂಪತ್ತಿನಲ್ಲಿ ಮಗಳಿಗೂ ಮಗನ ಅರ್ಧಭಾಗವು ಸಿಗುವುದು. ಇದು ಮುಸಲ್ಮಾನ ಮತದ ನಕಲು. ಈ ಸಕಲು ಧನವನ್ನೂ ಧರ್ಮವನ್ನೂ ಆಸ್ತಿಯನ್ನೂ ವಿನಾಶಗೊಳಿಸುವುದು.

2 ಹಿಂದೂ ಸ್ತ್ರೀಯರಿಗೆ ತನ್ನ ಆಸ್ತಿಯನ್ನು ಅಡುವು, ದಾನ ಮತ್ತು ಮಾರಾಟ ಮಾಡಲು ಪೂರ್ಣ ಅಧಿಕಾರ ಬರುವುದು. ಇನ್ನು ಹಿಂದೂ ಸ್ತ್ರೀಯು ಆಕೆಯ ಆಸ್ತಿಯನ್ನು ವಿಧರ್ಮಿಗೆ ಕೂಡ ಕೊಡಬಹುದು, ಆಕೆಯನ್ನು ಕುಟುಂಬಗಳು ತಡೆಯಲಾರರು.

3 ಹಿಂದೂ ಸ್ತ್ರೀ ಪುರುಷರು ಮದುವೆಯಾದ ಬಳಿಕ ವಿವಾಹವಿಚ್ಛೇದ ಮಾಡಿಕೊಂಡು ಎಂದು ಬೇಕಾದರಂದು ಒಬ್ಬರನ್ನೊಬ್ಬರು ಬಿಡಬಹುದು. ಇನ್ನು ಯಾರೇ ರಸಿಕ ವ್ಯಕ್ತಿಯು ತನ್ನ ಮದುವೆಯಾದ ಹೆಂಡತಿಯನ್ನು ವಿಚ್ಛೇದ ಮಾಡಿಬಿಟ್ಟು ಅವಳ ಬಾಳನ್ನು ನಾಶಗೊಳಿಸಬಹುದು. ಇದು ಸಹ ಮುಸಲ್ಮಾನ ಮತದ್ದೇ ಪ್ರಭಾವ.

4 ಹಿಂದೂಜಾತಿಯು ಎಲ್ಲ ಉಪಜಾತಿಗಳಲ್ಲಿ ವಿವಾಹ ನಡೆಯಬಹುದು, ಜಾತಿ ವ್ಯವಸ್ಥೆಯು ವಿಚಾರವೇನೂ ಇರುವುದಿಲ್ಲ.

5 ಹಿಂದೂ ಧರ್ಮಗಳೊಳಗೆ ಬಂದ ಮುಸಲ್ಮಾನ ಕ್ರೈಸ್ತಾದಿಗಳೂಕೂಡ ಹಿಂದೂ ಹುಡುಗಿಯನ್ನು ಲಗ್ನಮಾಡಿಕೊಳ್ಳಬಹುದು, ಆಗಾಗ ಹಿಂದೂ ಸಂಪತ್ತಿಗೆ ಒಡೆಯರಾಗಬಹುದು. ಆ ಮೇಲೆ ಸಂಪತ್ತು ಮತ್ತು ಹೆಂಗಸನೊಂದಿಗೆ ತನ್ನ ಧರ್ಮಕ್ಕೆ ಪುರಳಿ ಹೋಗಲೂ ಬಹುದು.

6 ವಿವಾಹವು ಸಗೋತ್ರದೊಳಗೂ ಆಗಬಹುದಲ್ಲದೆ ಅದು ವೈಧವಾಗುವುದು. ಸಗೋತ್ರದಲ್ಲಿಯೂ ವಿವಾಹವಾಗುವುದೆಂದರೆ, ತಂಗಿಯನ್ನೂ ಮಗಳನ್ನೂ ಲಗ್ನಮಾಡಿಕೊಳ್ಳಬಹುದು.

7 ಒಟಹುಟ್ಟಿದವರ ಮೊಮ್ಮಗಳಂದಿರೊಳಗೂ ಮದು ಬಹುದು. ಅಂದರೆ ಸಪಿಂಡದಲ್ಲಿ ಮದುವೆಯಾಗಬಹುದು. ಇದೆ ಮುಸಲ್ಮಾನೀ ಧರ್ಮದ ಅನುಸರಣೆ.

8 ರಿಜಿಸ್ಟ್ರಾಯಿಂದ ವಿವಾಹವ ಬಿಡುವುದು; ಕಛೇರಿಗೆ ಒಡಾಟ ಮಾಡ ಬೇಕಾಗುವುದು; ಎಲ್ಲ ದಾನಗಳಲ್ಲಿಯೂ ಶ್ರೇಷ್ಠವಾದ ಕನ್ಯಾದಾನಕ್ಕೆ ಲೋಪಬರುವುದು.

9 ಯಾವುದೇ ಜಾತಿಯ ಹುಡುಗನನ್ನು ದತ್ತಕ್ಕೆ ತೆಗೆದುಕೊಳ್ಳಬಹುದು, ತಮ್ಮ ವಂಶ ಮತ್ತು ಜಾತಿಯೊಳಗಿಂದ ಇನ್ನು ದತ್ತು ಮಾಡಿಸಿಕೊಳ್ಳುವ ಅವಕತೆ ಇಲ್ಲ.

ಮೇಲೆ ತಿಳಿಸಿದ ಮಾರ್ಪಾಡುದೂ ಜಾತಿಗೂ ಸಭ್ಯತೆಗೂ ಸಂಗೂ ಧರ್ಮಕ್ಕೂ ಎಷ್ಟು ಘಾತಉಂಟು ಮಾಡುವುದೆಂಬುದು ಸ್ಪವಾಗಿಯೇ ಇದೆ.

ಸಮಸ್ತ ಹಿಂದೂ ಜಾ
ಎಚ್ಚೆತ್ತು ಹಿಂದೂಕೋಡ
ವಿರೋಧಿಸತಕ್ಕದ್ದು: ಗ
ಹಸ್ತಾಕ್ಷರ, ಪತ್ರ, ಮತ್ತು
ಮೂಲಕವಾಗಿ ಕೇಂದ್ರಿಯ ಸ
ವಿರೋಧವನ್ನು ಕಳುಹಿಸಬೇಕ
ತ್ಯ ಬಿದ್ದಾಗ ಕೇಂದ್ರೀಯ ಧಾರ
ಯ. ಭವನದೆದುರು ಸಕ್ರಿಯವಾಗಿ
ರ್ಶನ ನಡೆಸಲಿಕ್ಕೂ ಸಿದ್ಧರಾಗಿರಬ

ಧರ್ಮಕ್ಕೆ ಜಯವಾಗಲಿ!
ಕ್ಕೆ ನಾಶವಾಗಲಿ! ಪ್ರಾ
ಸದ್ಭಾವನೆಯುಂಟಾಗಲಿ!
ಕಲ್ಯಾಣವಾಗಲಿ!

" ಹರ ಹರ ಮಹಾದೇ

Save the

ಗೋ ವಧೆ ನಿ

Edited, Printed an
by M S Krishna
Satyavadi Press,
Agrahar, Mysore,

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಪ್ರಬೋಧ ಪುಟದಿಂದೊಡಗೂ
ೋಮವಾರ ಸಂಚಿಕೆ ವಾರ್ಷಿಕ
ಪರಸ್ಥಳಕೆ